**ಚಾಸಾ-3 ಪ್ರಾ ಸಾ-3**

**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 14253/2014**

**ಚಾಸಾ- 3 ಪ್ರಾ ಸಾ-3**

| | |
|---|---|
| **ಸಾಕ್ಷಿದಾರರ ಹೆಸರು** | ಯೋಗೀಶ್.ಹೆಚ್.ಟಿ |
| **ತಂದೆಯ/ ಗಂಡನ ಹೆಸರು** | ತಮ್ಮಯ್ಯ |
| **ವಯಸ್ಸು** | 33 ವರ್ಷ |
| **ಉದ್ಯೋಗ** | ಸಹಾಯ ಅಭಿಯಂತರರು , ನಗರಾಭಿವೃಧಿ ಪ್ರಾಧಿಕಾರ, ಹಾಸನ |
| **ವಾಸ** | ಹಾಸನ. |
| **ಪ್ರಮಾಣೀಕರಿಸಿದ ದಿನಾಂಕ** | 12.02.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ದಿ.21.06.2013 ರಂದು 05.30 ರಿಂದ 06.30 ರವರೆಗೆ ನಾನು ನನ್ನ ವೈಯಕ್ತಿಕ ಕೆಲಸದ ಮೇರೆಗೆ ಎಪಿಎಂಸಿಯಾರ್ಡ್ ಯಶವಂತ ಪುರ ಹತ್ತಿರ ಹೋದಾಗ ಚಾಸಾ-6 ರವರು ಠಾಣೆಗೆ ಬರುವಂತೆ ಹೇಳಿದರು. ಆರ್.ಎಂ.ಸಿ ಯಾರ್ಡ್ ಪೊಲೀಸರು ಕರೆದಿದ್ದರು. ಅಲ್ಲಿ ಅನುಪಮ ಎನ್ನುವವರು ಕೆಲವು ದಾಖಲೆಗಳನ್ನು ಪೊಲೀಸರಿಗೆ ಹಾಜರುಪಡಿಸಿದ್ದರು. ಮಹೇಶ್ ಎಂಟರ್ ಪ್ರೈಸಸ್ ಎಂಬ ಅಂಗಡಿಗೆ ಸಂಬಂಧಿಸಿದಂತೆ ಐದು ಹಾಳೆಗಳುಳ್ಳ ಒಂದು ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ಪೊಲೀಸರು ಜಪ್ತಿಪಡಿಸಿಕೊಂಡು ಪಂಚನಾಮೆ ಮಾಡಿದರು. ಅದಕ್ಕೆ ನಾನು ಸಹಿ ಮಾಡಿದ್ದೇನೆ. ನನ್ನ ಸಹಿಯನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸಹಿ ಗುರುತಿಸಿದ್ದುಸದರಿ ದಾಖಲೆಯನ್ನು ಈಗಾಗಲೇ ನಿಪಿ.30 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.30(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ದಾಖಲೆ ನಮ್ಮ ಸಮಕ್ಷಮ ಪೊಲೀಸರು ಜಪ್ತಿ ಪಡಿಸಿಕೊಂಡ ದಾಖಲೆಯಾಗಿದ್ದು ಅ ದನ್ನು

ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದೆ. ಈ ಕುರಿತು ಪೊಲೀಸರು ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ . ಕೆ.ವಿ. ಎಸ್ ವಕೀಲರಿಂದ ಃ ಆರೋಪಿ ಪರವಾಗಿಃ**

ಪಿರ್ಯಾದುದಾರರಾ ಅನುಪಮರವರ ಊರು ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-1 ಅನುಪಮ ನನಗೆ ತುಂಬಾ ಪರಿಚಯಸ್ತರು ಎನ್ನುವುದು ಸರಿಯಲ್ಲ. ನನ್ನ ಸ್ವಂತ ಊರು ಹೊಳನರಸಿಪುರ ತಾಲ್ಲೂಕಿನ ಹರಿಹರ ಪುರ ಗ್ರಾಮ ಆಗಿರುತ್ತದೆ. ಚಾಸಾ-1 ರವರು ಹೊಳೆನರಸಿಪುರ ತಾಲ್ಲೂಕಿನ 2019ರ ವಿಧಾನಸಭಾ ಕ್ಷೇತ್ರದ ಕಾಂಗ್ರೇಸ್ ಅಭ್ಯರ್ಥಿಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರ ಸ್ವಂತ ಊರು ಸಾಲಿಗ್ರಾಮ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಊರು ಮತ್ತು ಚಾಸಾ-1 ರವರ ಊರು ಎರಡು ಕಿಲೋಮೀಟರ್ ಅಂತರದಲ್ಲಿರುತ್ತದೆ ಎಂದರೆ ಸರಿಯಲ್ಲ.

2. ದಿ.21.06.2013 ರಂದು ನಾನು ಬೆಂಗಳೂರಿಗೆ ಬಂದಿದ್ದೆ. ನನ್ನ ಚಿಕ್ಕಪ್ಪ ವ್ಯಾಪಾರಸ್ತರಾಗಿದ್ದರು ಅವರು ಎಪಿಎಂಸಿ ಯಾರ್ಡ್ ನಲ್ಲಿ ಒಬ್ಬರ ಹತ್ತಿರ ಹಣ ತೆಗೆದುಕೊಂಡು ಬರುವಂತೆ ಹೇಳಿದ್ದು ಆ ಕಾರಣ ನಾನು ಬೆಂಗಳೂರಿನ ಎಪಿಎಂಸಿಗೆ ಬಂದಿದ್ದೆ. ಅವರ ಹೆಸರು ನನಗೆ ಈಗ ನೆನಪಿಲ್ಲ ಏಕೆಂದರೆ ಬಹಳ ವರ್ಷಗಳಾಗಿರುತ್ತದೆ. ನಾನು ಕೆಲಸ ಮುಗಿಸಿಕೊಂಡು ಹೋಗುವಾಗ ಪೊಲೀಸರು ನನ್ನನ್ನು ಕರೆದರು. ಪೊಲೀಸರು ಕರೆದಾಗ ನಾನು ಪೊಲೀಸ್ ಠಾಣೆಯ ಹತ್ತಿರ ಇದ್ದೆ. ಪೊಲೀಸರು ನೋಟಿಸ್ ಕೊಟ್ಟಿಲ್ಲ ಮೌಖಿಕವಾಗಿ ಕರೆದಿರುತ್ತಾರೆ.

3. ಮಹೇಶ್ ಎಂಟರ್ ಪ್ರೈಸಸ್ ಅಂದರೆ ಚಾಸಾ-1 ರವರ ಗಂಡನ ಅಂಗಡಿ ಎಂದರೆ ನನಗೆ ಗೊತ್ತಿಲ್ಲ. ಆ ದಿನ ಪೊಲೀಸರು ನನ್ನ ಸಮಕ್ಷಮ ಒಂದು ಡೀಡ್ ಜಪ್ತಿ ಮಾಡಿರುತ್ತಾರೆ. ಅದರಲ್ಲಿ ರೂ.100 ಸ್ಟಾಂಪ್ ಮೇಲೆ ಬರೆದು ನಾಲ್ಕು ಹಾಳೆಗಳು ಮತ್ತು ರೂ.50 ಸ್ಟಾಂಪ್ ಮೇಲೆ ಬರೆದ ಒಂದು ಹಾಳೆ ಇತ್ತು. ಅದರ ಮೇಲೆ ಮಹೇಶ್ ಎಂಟರ್ ಪ್ರೈಸಸ್ ಪಾರ್ಟನರ್ ಶೀಪ್ ಡೀಡ್ ಎಂದು ಬರೆದಿತ್ತು. ಅದರಲ್ಲಿ ನನಗೆ ನೆನಪಿದ್ದ ಪ್ರಕಾರ ಮೊದಲನೇ ಪಾರ್ಟಿ ಅನುಪಮ, ಎರಡನೇ ಪಾರ್ಟಿ ಜಿ.ಪುಟ್ಟಸ್ವಾಮಿ ಗೌಡ ಮತ್ತು ಮೂರನೇ ಪಾರ್ಟಿ ಗೋವಿಂದ ರಾಜು ಅಂತ ಇತ್ತು.

4. ಆ ಸಮಯದಲ್ಲಿ ನಮ್ಮ ಜೊತೆ ಅನುಪಮ, ರಾಘವೇಂದ್ರ ಮತ್ತು ಸರ್ವೇಶ್ ಎನ್ನುವವರು ಇದ್ದರು. ಸರ್ವೇಶ್ ರವರ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ಸರ್ವೇಶ್ ರವರ ಊರು ಸಾಲಿಗ್ರಾಮ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇಶ್ ರವರು ನನಗೆ ತುಂಬಾ ಚೆನ್ನಾಗಿ ಗೊತ್ತು, ಅವರೇ ನನ್ನನ್ನು ಇಂದು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಸಾಲಿಗ್ರಾಮದ ಹತ್ತಿರ ಇರುವ ಹರಿಹರಪುರ ಬೇರೆ ನಮ್ಮ ಊರು ಹೊಳೆನರಸಿಪುರ ತಾಲ್ಲೂಕಿನ ಹೊಳೆ ಕೋಟೆ ಹೋಬಳಿ ಹರಿಹರ ಪುರ ಗ್ರಾಮ ಬೇರೆ. ನಮ್ಮ ಊರಿಗೂ ಮತ್ತು ಸಾಲಿಗ್ರಾಮಕ್ಕೂ 30 ಕಿಲೋಮೀಟರ್ ಅಂತರ ಇರುತ್ತದೆ ಅಂತ ನುಡಿಯುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಖಾಲಿ ಪೇಪರ್ ಮೇಲೆ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

5. ನಾನು, ಅನುಪಮ ಮತ್ತು ಸರ್ವೇಶ್ ರವರು ಆ ದಿನ ಹೊಳೆನರಸೀಪುರದಿಂದ ನೇರವಾಗಿ ಠಾಣೆಗೆ ಬಂದು ಅಮಾನತ್ತು ಪಂಚನಾಮೇ ಮಾಡಿರುತ್ತೇವೆ ಆದರೂ ಸಹ ಅವರು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅನುಪಮ ರವರು ನನಗೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕೆಲಸ ಕೊಡಿಸಿರುತ್ತಾರೆ ಆದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**